ಶ್ರೀ ಹೆಚ್.ಬಿ. ಜ್ಞಾನಸುಬ್ಬಯ್ಯ(ಹಾಸನ).—ಸರಕಾರ ಇದರಲ್ಲಿ ಪರ್ಮಿಷನ್ ಕೊಟ್ಟಿಲ್ಲ ಎಂದರೆ ಇಲ್ಲಿಯವರೆಗೂ ಇಷ್ಟೊಂದು ಅವ್ಯವಹಾರಗಳು ಆಗುತ್ತಿರುವಾಗ ಸರಕಾರ ಇವನ್ನು ನಿರಿಪಡಿಸುವುದು ಅವರ ಕರ್ತವ್ಯವಲ್ಲವೇ ಎನ್ನುತ್ತ, ಅವರಿಗೆ ಅಧಿಕಾರ ಇಲ್ಲವೇ? ಇಲ್ಲಿರುವ ವಿದ್ಯಾರ್ಥಿಗಳ ಗತಿಯೇನು?

ಶ್ರೀ ಎನ್.ಎಂ. ಕೊಟ್ರಬಸಯ್ಯ ಸೋಗಿ.—ನಾನಾಗಲೇ ಸ್ಪಷ್ಟಪಡಿಸಿದ್ದೇನೆ. ಇದರೊಳಗೆ ಕ್ಲಾಸುಗಳನ್ನು ನಡೆಸುವುದಕ್ಕೆ ಪರ್ಮಿಷನ್ ಕೊಡುವದೇ ಬೇರೆ, ಕಟ್ಟಡವನ್ನು ಬದಲಾಯಿಸಿ ಬೇರೆ ಕಡೆ ಕಾಲೇಜು ನಡೆಸುವ ವಿಚಾರವೇ ಬೇರೆ. ಇದರಲ್ಲಿ ಇರುವ ವಿದ್ಯಾರ್ಥಿಗಳಿಗೆ ಯಾವ ತೊಂದರೆಯೂ ಆಗದಂತೆ ಸಾಧ್ಯವಾದಷ್ಟು ಅನುಕೂಲ ಮಾಡಿಕೊಡುತ್ತೇವೆ ಮತ್ತು ಇದರ ಬಗ್ಗೆ ನೂಕ್ತ ನಿರ್ದೇಶನವನ್ನು ಸರಕಾರದವರು ಯೂನಿವರ್ಸಿಟಿಯವರಿಗೆ ಕಳುಹಿಸಿ ಕೊಡುತ್ತಾರೆ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನಾನು ಒಂದು ನೋಟೀಸು ತಮ್ಮ ಕಡೆಗೆ ಕಳುಹಿಸಿದ್ದೆ.

ಅಧ್ಯಕ್ಷರು.—ತಾವು ಕಳುಹಿಸಿರುವ ವಿಚಾರವನ್ನು ಇಂದು ಬಿಸಿನೆಸ್ ಅಡ್ವೈಜರಿ ಕಮಿಟಿ ಮುಂದೆ ಇಡುತ್ತೇನೆ.

Request for declaring Public holiday on 2nd April for celebrating Kempe Gowda Day

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ಇಷ್ಟೊಂದು ಪ್ರಸಿದ್ಧಿಗೆ ಬರಲು ಕಾರಣರಾದ ಶ್ರೀ ಕೆಂಪೇಗೌಡರ ದಿನಾಚರಣೆಯನ್ನು ನಾಳೆ ಬರುವ ಎರಡನೇ ತಾರೀಖು ಬರುತ್ತದೆ. ಇವಕ್ಕಾಗಿ ಸರಕಾರದವರು ಅಂದು ರಜಾ ಘೋಷಣೆ ಮಾಡಬೇಕು ಎಂದು ಇದಕ್ಕಾಗಿ ತಮಗೆ ನೋಟೀಸು ಕಳುಹಿಸಿದ್ದೇನೆ.

ಅಧ್ಯಕ್ಷರು.—ಇದನ್ನು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿಟ್ಟು ವಿಚಾರ ಮಾತೋಣ.

ಶ್ರೀ ಎಸ್. ಶಿವಪ್ಪ.—ಸ್ವಾಮೀ, ಇದು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಇಡುವ ವಿಚಾರವಲ್ಲ. ಇದು ರಜಾ ಘೋಷಣೆ ಮಾಡಬೇಕಾದ ವಿಚಾರ. ಇಲ್ಲಿರುವ ಸರಕಾರ ಹಾಗೂ ಈ ಹೌಸ್‌ನಲ್ಲಿ ಇದರ ಬಗ್ಗೆ ನಿರ್ಧಾರವಾಗಬೇಕು. ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಚರ್ಚಿಸುವುದು ಇಲ್ಲಿನ ಕೆಲಸಗಳು ಯಾವ ರೀತಿ ಆಗಬೇಕು ಎನ್ನುವುದರ ಬಗ್ಗೆ ಮಾತ್ರ. ಅದರಲ್ಲಿ ರಜಾದ ವಿಚಾರ ಬರುವುದಿಲ್ಲ. ರಜಾ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಇಲ್ಲಿ ತಮ್ಮನ್ನು ಕೇಳುತ್ತಿದ್ದಾರೆ. ಇದು ಸರಕಾರಕ್ಕೆ ಸಂಬಂಧಪಟ್ಟದ್ದು ಎಂದು ಇಲ್ಲಿ ಆ ಸೂಚನೆ ತಮ್ಮ ಮುಂದಿಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ವ್ಯಾಪಮುಖ್ಯವಾದ ತುರ್ತು ಪ್ರಶ್ನೆ. ಆದಕ್ಕಾಗಿ ಇಲ್ಲಿ ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜರವರು ಅಸೆಂಬ್ಲಿಗೆ ರಜಾ ಕೊಡಿ ಎಂದು ಹೇಳುತ್ತಾ ಇಲ್ಲ. ಸರ್ಕಾರ ರಜಾ ಘೋಷಿಸಬೇಕೆಂದು ಹೇಳುತ್ತಿದ್ದಾರೆ. ಕೆಂಪೇಗೌಡರ ಮೇಲೆ ನಮಗೆ ಅಭಿಮಾನ ಇದೆ. ಆದರೂ ಸರ್ಕಾರ ಕೆಂಪೇಗೌಡರ ದಿನದಪ್ರಯುಕ್ತ ರಜಾ ಘೋಷಣೆ ಮಾಡಲು ಒಪ್ಪುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಎಂತೆಂಥ ದಿವಸಗಳಲ್ಲೋ ನಮಗೆ ರಜಾ ಸಿಕ್ಕಿದೆ. ಆದರೆ ಹಾಗಿರುವಾಗ ಇದು ಪವಿತ್ರ ದಿನ, ಇದಕ್ಕೆ ರಜಾ ಕೊಡಬೇಕು.

ಶ್ರೀ ಎಸ್. ಶಿವಪ್ಪ.—ಬೆಂಗಳೂರಿನಲ್ಲಿ ಯಾರಾದರೂ ಜ್ಞಾಪಕಕ್ಕೆ ತೆಗೆದುಕೊಳ್ಳುವ ವ್ಯಕ್ತಿ ಎಂದರೆ, ಕೆಂಪೇಗೌಡರು. ಅಂಥವರ ದಿನಾಚರಣೆ ಮತ್ತು ಕರಗ, ಬೆಂಗಳೂರಲ್ಲಿ ನಡೆಯುವುದು, ದಸರಾ ಆಚರಿಸಿದ ಹಾಗೆ. ಆದ್ದರಿಂದ ರಜಾ ಕೊಡಬೇಕೆಂದು ಹೇಳುತ್ತೇನೆ. ಇಡೀ ದೇಶಕ್ಕೆ ರಜಾ ಕೊಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ, ಬೆಂಗಳೂರು ಸಿಟಿಗಾದರೂ ರಜಾ ಕೊಡುವುದನ್ನು ವಿಚಾರ ಮಾಡಬೇಕು. ಯೋಚನೆ ಮಾಡಿ ಒಂದು ನಿರ್ಣಯಕ್ಕೆ ಬರುತ್ತೇವೆಂದು ಹೇಳಿದರೆ ಸಂತೋಷ ಬೆಂಗಳೂರಲ್ಲಿ ರಜಾ ಘೋಷಣೆ ಮಾಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

L.A.

ಅಧ್ಯಕ್ಷರು.—ಸರ್ಕಾರ ರಜಾ ಕೊಡುವುದನ್ನು, ಸರ್ಕಾರ ನಿರ್ಣಯ ಮಾಡಬೇಕು. ಅಸೆಂಬ್ಲಿಯಲ್ಲಿ ಬಿಸಿನೆಸ್ ನಡೆಯಬೇಕೇ, ಬೇಡವೇ ? ಎನ್ನುವುದು ತಮಗೆ ಸೇರಿದ್ದು. ಬಿಸಿನೆಸ್ ಅಡ್ವೈಸರಿ ಕಮಿಟಿ ಇವತ್ತು ಕೂರುತ್ತಾ ಇದೆ. ಏನು ನಿರ್ಣಯವಾಗುತ್ತದೆಂದು ನೋಡೋಣ.

ಶ್ರೀ ಎಚ್. ಎನ್. ನಂಜೇಗೌಡ.—ಫೂಟ್‌ಬಾಲ್ ಮ್ಯಾಚಿನಲ್ಲಿರತಕ್ಕ ಅಭಿಮಾನಕ್ಕಿಂತಲೂ ಹೆಚ್ಚಿನ ಅಭಿಮಾನ ಕೆಂಪೇಗೌಡರ ವಿಷಯದಲ್ಲಿ ಇದೆ ಎಂದು ಕಾಣುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾವು ಎಲ್ಲಾ ಇರುವುದು ಬೆಂಗಳೂರಲ್ಲಿ. ತಾವು ಇರುವುದು ಬೆಂಗಳೂರಲ್ಲಿ ಮಾನ್ಯ ಪುಟ್ಟಸ್ವಾಮಿಯವರ ಮನೆ ಇರುವುದು ಬೆಂಗಳೂರಲ್ಲಿ. ಇಂಥ ಒಂದು ಪವಿತ್ರ ದಿನ ರಜೆ ಕೊಟ್ಟರೆ, ಅದು ನ್ಯಾಯವಾಗಿರುತ್ತದೆ. ಯಾವ್ಯಾವುದಕ್ಕೋ ರಜೆ ಕೊಡುತ್ತೀರಿ. ಆದ್ದರಿಂದ ಕೆಂಪೇಗೌಡರ ದಿನಾಚರಣೆಗೂ ರಜೆ ಡಿಕ್ಲೇರ್ ಮಾಡಿದರೆ ಅದು ಜನರು ಒಪ್ಪತಕ್ಕ ವಿಷಯ. ಆದ್ದರಿಂದ ರಜಾ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ನಾಗರಾಜರು ಪದೇ ಪದೇ ಈ ವಿಚಾರವನ್ನು ಹೇಳುತ್ತಿದ್ದಾರೆ. ಈ ಮಧ್ಯೆ ಫೂಟ್‌ಬಾಲ್‌ಗೆ ರಜಾ ಕೊಟ್ಟರು ಎಂದು ವಿರೋಧಪಕ್ಷದ ಸದಸ್ಯರೊಬ್ಬರು ಹೇಳಿದರು. ಫೂಟ್‌ಬಾಲ್ ಮ್ಯಾಚನ್ನು 4-5 ಗಂಟೆಗೆ ಆಡುತ್ತಾರೆ; ಆದ್ದರಿಂದ ಮೂರು ಗಂಟೆಯಿಂದ ರಜಾ ಕೊಟ್ಟಿರಬಹುದು. ಆದರೆ ಕರಗ ಮೆರವಣಿಗೆ ಮಾತ್ರ 12 ಗಂಟೆಯ ಮೇಲಾಗುತ್ತದೆ; ವರ್ಕಿಂಗ್ ಅವರ್ಸ್‌ನಲ್ಲಿ ಆಗುವುದಿಲ್ಲ. ನೋಡಬೇಕೆಂದಿರುವವರು, ನೋಡಬಹುದು. ವಿರೋಧ ಪಕ್ಷ ನಾಯಕರು ಯೋಚನೆ ಮಾಡಿ ಎಂದು ಹೇಳಿದ್ದಾರೆ. ಯೋಚನೆ ಮಾಡುತ್ತೇವೆ.

Hyderabad Jagirs (Commutation) Regulation (Mysore Amendment) Bill, 1967

(Introduction)

Sri K. PUTTASWAMY (Minister for Law, Labour and Parliamentary Affairs).—On behalf of the Minister for Revenue, I beg to introduce the Hyderabad Jagirs (Commutation) Regulation (Mysore Amendment) Bill, 1967.

Mr. SPEAKER.—The Hyderabad Jagirs (Commutation) Regulation (Mysore Amendment) Bill, 1967, is introduced.

Mysore Inams Abolition Laws (Amendment) Bill, 1968

(Introduction)

Sri K. PUTTASWAMY.—On behalf of the Minister for Revenue, I beg to introduce the Mysore Inams Abolition Laws (Amendment) Bill, 1968.

Mr. SPEAKER.—The Mysore Inams Abolition Laws (Amendment) Bill, 1968, is introduced.

Mysore Sales Tax and Entertainment Tax (Amendment) Bill, 1969

(Introduction)

Sri K. PUTTASWAMY.—On behalf of the Minister for Finance, I beg to introduce the Mysore Sales Tax and Entertainment Tax (Amendment) Bill, 1969.